**<u>ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ದಾಂಡೇಲಿ</u>**

**ಸಿ. ಸಿ.- 745/2024**

**ಫಿರ್ಯಾದುದಾರರು** : ಶ್ರೀ ಛತ್ರಪತಿ ಶಿವಾಜಿ ವಿವಿಧೋದ್ದೇಶಗಳ ಸಹಕಾರಿ ಸಂಘ ನಿಯಮಿತ, ಹಳಿಯಾಳ, (ಉ.ಕ), ಶಾಖೆಃ ದಾಂಡೇಲಿ ತಾಲೂಕು, ಇದರ ಪರವಾಗಿ ದಾಂಡೇಲಿ ಶಾಖಾ ವ್ಯವಸ್ಥಾಪಕರು, ಸಾಕೀನಃ ರಾಮನಗರ ಶಾಖೆ, ತಾಃ ಜೋಯಿಡಾ, ಜಿಲ್ಲೆಃ ಉತ್ತರ ಕನ್ನಡ.

**---ವಿರುದ್ಧ---**

**ಆರೋಪಿ** ಃ ಶ್ರೀ. ಸಂತೋಷ ರಾಮಚಂದ್ರ ದೇಸಾಯಿ, ವಯಸ್ಸುಃ 45 ವರ್ಷ, ಉದ್ಯೋಗಃ ವ್ಯಾಪಾರ, ಸಾಕೀನಃ ಎಚ್.ನಂ. 97, ಕಪೋಲಿ ಗ್ರಾಮ, ತಾಃ ಕಪೋಲಿ, ಖಾನಾಪುರ, ಜಿಲ್ಲೆಃ ಬೆಳಗಾವಿ.

ಆರೋಪಿಯಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ನಾನು ಹೊರಿಸಿರುವಃ

**<u>ಆ ಪಾ ದ ನೆ</u>**

ಏನೆಂದರೆ ಆರೋಪಿಯಾದ ನೀವು ಫಿರ್ಯಾದಿ ಸಂಸ್ಥೆಯ ಗ್ರಾಹಕರಾಗಿದ್ದು, ಆರೋಪಿಯಾದ ನೀವು ಫಿರ್ಯಾದಿ ಸಂಸ್ಥೆಯಿಂದ ರೂ.6,00,000/- ರೂಪಾಯಿಗಳನ್ನು ದಿನಾಂಕಃ 06-07-2017 ರಂದು ವ್ಯಾಪಾರ ಸಾಲವನ್ನು ಪಡೆದುಕೊಂಡಿದ್ದು, ನಂತರ ಫಿರ್ಯಾದಿ ಸಂಸ್ಥೆಯವರು ಕೆಲವು ದಿನಗಳು ಬಿಟ್ಟು ನಿಮಗೆ ಸದರಿ ಹಣವನ್ನು ಮರಳಿ ಕೊಡಲು ಕೇಳಿದಾಗ, ನೀವು ದಿನಾಂಕ 23.07.2024 ರಂದು ಆರ್.ಬಿ.ಐ. ಬ್ಯಾಂಕ, ಕ್ಲಬ್ ರೋಡ, ಕೋರ್ಟಿನ ಹಿಂದುಗಡೆ, ಧಾರವಾಡ ಶಾಖೆಯ ದಾಂಡೇಲಿ ನಿಮ್ಮ ಖಾತೆ

ನಂ.309003132887 ನೇದ್ದಕ್ಕೆ ಸಂಬಂಧಿಸಿದ ಚೆಕ್ ನಂ.000008 ಚೆಕ್ಕನ್ನು ರೂ.9,00,000/- ಹಣದ ಪಾವತಿಗಾಗಿ ಫಿರ್ಯಾದಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದಿದಾರರು ಕೆ.ಡಿ.ಸಿ.ಸಿ. ಹಳಿಯಾಳ ಶಾಖೆಯಲ್ಲಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕನ್ನು ಪರಿಶೀಲಿಸಿ ದಿನಾಂಕ 24.07.2024 ರಂದು "Kindly Contact Drawer/Drawee Bank and Pleasen" ಎಂಬ ಹಿಂಬರಹದೊಂದಿಗೆ ಉತ್ತರಿಸಿರುತ್ತಾರೆ. ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕಃ 03-08-2024 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸನ್ನು ಜಾರಿ ಮಾಡಿದ್ದರೂ ಸಹ ನೀವು ಚೆಕ್ಕಿನ ಹಣ ಪಾವತಿ ಮಾಡದೇ ಉದ್ದೇಶಪೂರ್ವಕವಾಗಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬ ವಿಚಾರವನ್ನು ತಿಳಿದಿದ್ದು ಚೆಕ್ಕನ್ನು ನೀಡಿ ನೆಗೋಶಿಯಬಲ್ ಇನ್ಸ್‌ಷ್ಟ್ರುಮೆಂಟ್ ಕಾಯ್ದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

## <u>ಆರೋಪಿಯ ಹೇಳಿಕೆ</u>

1. ಪ್ರಶ್ನೆಃ ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

ಉತ್ತರಃ

2 .ಪ್ರಶ್ನೆಃ ಈ ಆರೋಪಣೆಯ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿ ಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

**(ಈ ಆರೋಪಣೆಯನ್ನು ದಿನಾಂಕಃ 03.12.2025 ರಂದು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ಅವರಿಂದ ಉತ್ತರ ಪಡೆದು ದಾಖಲಿಸಿದ್ದೇನೆ.)**

**ಸಹಿ/-**
**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದಾಂಡೇಲಿ**